3. ಅರ್ಧ ಗಂಟೆ ಕಾಲಾವಧಿಯ ಚರ್ಚೆ

1) ವಿಷಯ: ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮಾಡಿಕೊಂಡಿರುವ ಒಡಂಬಡಿಕೆ ಬಗ್ಗೆ.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ):– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಸಲುವಾಗಿನ ವಿಚಾರ.

ಅಧ್ಯಕ್ಷರು:– ತಾವು ವಿಷಯವನ್ನು ಸಂಕ್ಷಿಪ್ತವಾಗಿ ಹೇಳಬೇಕು.

ಶ್ರೀ ಬಸವರಾಜ ರಾಯರೆಡ್ಡಿ:– ಆಯಿತು ಸಾರ್, ನಾನು 10–15 ನಿಮಿಷಗಳಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು:– OK, very good.

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಮಾಡಿಕೊಂಡಿರುವ ಒಡಂಬಡಿಕೆಗಳು ಮತ್ತು ರಾಜ್ಯದಲ್ಲಿ ಉದ್ಯಮಗಳ ಬೆಳವಣಿಗೆ, ಮುಂದಿನ ದಿನಗಳಲ್ಲಿ ಉದ್ದಿಮೆಗಳ ಸ್ಥಾಪನೆ, ಈ ವಿಚಾರದಲ್ಲಿ ನಾನು ಏನು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ತಾವು ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ನಾನು ತಮಗೆ ವೈಯಕ್ತಿಕವಾಗಿ ಅಭಿನಂದನೆ ಸಲ್ಲಿಸುತ್ತೇನೆ. ಇದು ಅತ್ಯಂತ ಪ್ರಮುಖವಾದ ವಿಚಾರವಾದ್ದರಿಂದ ತಾವು ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ದೇಶದ ಅಥವಾ ರಾಜ್ಯದ ಮಾನವ ಅಭಿವೃದ್ಧಿಯಾಗಬೇಕಾಗಿದ್ದರೆ ಕೃಷಿ ಮತ್ತು ಉದ್ದಿಮೆ ಬಹಳ ಮಹತ್ವದ್ದು. ಕೃಷಿ ಮತ್ತು ಉದ್ದಿಮೆ ಇವೆರಡೂ ಮನುಷ್ಯನಿಗೆ ಎರಡು ಕಣ್ಣುಗಳು ಹೇಗೋ ನಮ್ಮ ದೇಶದ ಎರಡು ಕಣ್ಣುಗಳಿದ್ದ ಹಾಗೆ. ನಮ್ಮ ರಾಜ್ಯದ ಅಥವಾ ದೇಶದ ಉತ್ಪನ್ನವನ್ನು ಅಳೆಯುವುದು, GDP ಯನ್ನು ಅಳತೆ ಮಾಡುವುದು ಮತ್ತು ನಮ್ಮ ಕೃಷಿ ಚಟುವಟಿಕೆ ಮತ್ತು ಉದ್ದಿಮೆಗಳ ಮೇಲೆ. ಇವತ್ತು ನಮ್ಮ ರಾಜ್ಯದಲ್ಲಿ ಕೂಡ ಕೃಷಿ ಪ್ರಧಾನವಾದಂಥ ರಾಜ್ಯವಾಗಿದೆ. ಅದರ ಜೊತೆಗೆ ಉದ್ದಿಮೆಗಳೂ ಇರುವುದರಿಂದ ಹೆಚ್ಚಿನ ಆದಾಯ ಬರತಕ್ಕಂಥದ್ದಾಗುತ್ತದೆ ಮತ್ತು ಅಭಿವೃದ್ಧಿಗಳಾಗುವುದಕ್ಕೆ ಸಾಧ್ಯವಿದೆ.

ಕೃಷಿ ಮತ್ತು ಉದ್ದಿಮೆ ಈ ಎರಡೂ ವಲಯಗಳಿಂದ GSDP ಎಂದರೆ ರಾಜ್ಯದ ಆರ್ಥಿಕ ಆಂತರಿಕ ಉತ್ಪನ್ನ more than 45% ಇದೆ. ಅದಕ್ಕೆ ಪ್ರಮುಖವಾಗಿ ಸುಮಾರು 25 ರಿಂದ 26% GDP ಬರುವುದೇ industry ಯಿಂದ. ಮಾನ್ಯ ಅಧ್ಯಕ್ಷರೆ, ನಾನು ಪ್ರಾರಂಭ ಮಾಡುತ್ತೇನೆ. ಏಕೆ ಮಹತ್ವದ್ದು ಎಂದು ಹೇಳುತ್ತೇನೆ.

ಅಧ್ಯಕ್ಷರು:– ಬಜೆಟ್‌ನ ಮೇಲೆ ಮಾತನಾಡುತ್ತೀರಲ್ಲ, ಆಗ ಹೇಳಿ. ಈಗೇನು question ಕೇಳಿದ್ದೀರಿ, ಆ question ಗೆ ನೇರವಾಗಿ ಬರುವುದು ಬಿಟ್ಟು ವಿಷಯಾಂತರ ಬೇಡ.

ಶ್ರೀ ಬಸವರಾಜ ರಾಯರೆಡ್ಡಿ:– ಉದ್ದಿಮೆಗಳ ಸ್ಥಾಪನೆಯಾಗಬೇಕು. GSDP ಬರುತ್ತಿದೆ ಎಂದು ನಾನು ಹೇಳುತ್ತಿರುವುದು. ಅದಕ್ಕೆ ಸಾಧನೆಯಾಗಬೇಕು.

ಅಧ್ಯಕ್ಷರು:– ಬೇಡ.

ಶ್ರೀ ಬಸವರಾಜ ರಾಯರೆಡ್ಡಿ:– ಆದರೆ, ಇತ್ತೀಚಿನ ವರ್ಷಗಳಲ್ಲಿ ಅಂದರೆ ಕಳೆದ 10 ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಉದ್ದಿಮೆಗಳ ಸ್ಥಾಪನೆ decline ಆಗುತ್ತಿದೆ, ಕಡಿಮೆಯಾಗುತ್ತಿದೆ. ಬರುತ್ತಿಲ್ಲ. ಕೇವಲ ಒಡಂಬಡಿಕೆಯಾಗುತ್ತಿದೆ. ಕೇವಲ ಮಾತುಕತೆಯಾಗುತ್ತಿದೆ. ಹೊಸ policy ಬರುತ್ತಿದೆ. ಇದರಲ್ಲಿ ಸಾಕಷ್ಟು ಅವ್ಯವಹಾರಗಳು ಆಗಿವೆ. ಏಕೆ ಅವ್ಯವಹಾರವಾಗಿದೆ ಎಂದರೆ ಸಿಕ್ಕಸಿಕ್ಕವರಿಗೆ land purchase ಮಾಡಲಿಕ್ಕೆ land ಅನ್ನು acquire ಮಾಡಿಕೊಳ್ಳಲಿಕ್ಕೆ ಹೋಗಿ ಇವತ್ತು ಉದ್ದಿಮೆಯೂ ಬರಲಿಲ್ಲ, ಕೃಷಿ ನಿಂತು ಹೋಯಿತು. ಕೃಷಿಯಿಂದ GDP, ನಮ್ಮ ಉತ್ಪನ್ನ ಕಡಿಮೆಯಾಯಿತು. ಇದರ ಬಗ್ಗೆ ಎಲ್ಲಾ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟವಾಗಿ ತಮ್ಮ ಇಚ್ಛಾಶಕ್ತಿಯನ್ನು ತೋರಿಸಿ, ಈ ವಿಚಾರದಲ್ಲಿ ಸ್ಪಷ್ಟವಾಗಿ ಅವರು ಒಂದು ಶ್ವೇತಪತ್ರವನ್ನು ತರುತ್ತಾರೆಂದು ನಾನು ಬಯಸುತ್ತೇನೆ. 2007ರಿಂದ ಆಚೆಗೆ heavy industry ಗಳು ಸಾಕಷ್ಟು ಬಂದವು. Jindal Steel Works ಬಂತು Kalyani Steels ಬಂತು. Volvo, Toyota

ಬಂತು, ನಾನು ಹೀಗೆ ಹಲವಾರು example ಕೊಟ್ಟಿದ್ದೇನೆ. ಬಂದ ಮೇಲೆ ಉದ್ಯೋಗ ಸಿಕ್ಕಿತು. I.T. industry ಬೆಳವಣಿಗೆಯಾಯಿತು. ಉದ್ಯೋಗ ಬಂತು. ಆಂತರಿಕ ಉತ್ಪನ್ನ ಬಂತು. ಆದರೆ, 10 ವರ್ಷ ಆದಮೇಲೆ ಏನು ಉದ್ದಿಮೆಗಳು ಕಡಿಮೆಯಾಗುತ್ತವೆ, ಈಗಲೂ ಕೂಡ ನಮ್ಮ ಮಾನ್ಯ ಮುಖ್ಯಮಂತ್ರಿಯವರು 2014 to 2019 vision book ತಂದಿದ್ದಾರೆ.

ಅಧ್ಯಕ್ಷರು:– ನೀವು ಪ್ರಶ್ನೆ ಏನು ಕೇಳಿದ್ದೀರಿ, ಆ ಪ್ರಶ್ನೆಗೆ ಉತ್ತರ ಏನು ಕೊಟ್ಟಿದ್ದಾರೆ, ಅಲ್ಲಿ ಸರ್ಕಾರದ ಸೋಲು ಎಲ್ಲಿದೆ ಅದನ್ನು point out ಮಾಡಿ ಹೇಳುವುದು ಬಿಟ್ಟು, ಸರ್ಕಾರದ policy ಆಮೇಲೆ ಮಾಡುವುದು. ನಿಮ್ಮ ಪ್ರಶ್ನೆಗೆ ಬನ್ನಿ. ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ:– ನಾನು ಅದಕ್ಕೇ ಬರುತ್ತಿದ್ದೇನೆ. ನಾನು 2 ಗಂಟೆಗೆ ಮುಗಿಸುತ್ತೇನೆ. ಇದು ಬೇಕಾಗುತ್ತದೆ. ಏನು policy ತಂದಿದ್ದಾರೆ, ಈ policy ಯಲ್ಲಿ ಬಹಳಷ್ಟು ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ. ಆದರೆ, industry ಬರುತ್ತಿಲ್ಲ. ಏಕೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕಾಗುತ್ತದೆ. ಒಂದು ಕಡೆ ವಿರೋಧ ಪಕ್ಷದವರು ಹೇಳುತ್ತಾ ಬಂದರು. Hero Honda ಕಂಪನಿ ಬೇರೆ ರಾಜ್ಯಕ್ಕೆ ಹೊರಟುಹೋಯಿತು. ನಮ್ಮ ರಾಜ್ಯದಲ್ಲಿ effort ಹಾಕುತ್ತಿಲ್ಲ ಎಂದು ಹೇಳಿದರು. ಅದು ಹಾಗೆ ಹಾಗಿಲ್ಲ. ಅದರ ಬಗ್ಗೆ ಆಮೇಲೆ ಮಾತನಾಡೋಣ. ಆದರೆ, ಮುಖ್ಯವಾಗಿ ನಾನು ಕೇಳುತ್ತಿರುವುದು, ಒಳ್ಳೆಯ policy ತಂದಿದ್ದೀರಿ, incentives ಕೊಟ್ಟಿದ್ದೀರಿ, Value Added Tax ಅನ್ನು 10 ವರ್ಷ free ಬಿಟ್ಟಿದೆ, ಆದರೂ industry ಬರುತ್ತಿಲ್ಲ. ಇದು ಒಂದು ಕಡೆ. ಹಿಂದಿನ ಸರ್ಕಾರವೂ ಕೂಡ ಎರಡು ಸಾರಿ ಅಂದರೆ 2010 ಮತ್ತು 2012ರಲ್ಲಿ Global Investment Meet ಮಾಡಿತು. Industry ಗಳು ಬರಲಿಲ್ಲ. ಅವರ ಉದ್ದೇಶ ಸರಿ ಇರಬಹುದು. ನಾನು ಅವರ ಉದ್ದೇಶದ ಬಗ್ಗೆ ಮಾತನಾಡುವುದಿಲ್ಲ. ಆದರೆ, ಆ ಉದ್ದೇಶದ ವಿಚಾರದಲ್ಲಿ industry ಯೂ ಬರಲಿಲ್ಲ, ರೈತರ land ಹೋಯಿತು. ಅದರ ಬಗ್ಗೆ ನಾನು ಮಾತನಾಡಲಿಕ್ಕೆ ಇಚ್ಛೆಪಡುತ್ತೇನೆ. GIM-10. ನಾನು ಮೊನ್ನೆ ಪ್ರಶ್ನೆ ಕೇಳಿದ್ದೆ. ಆ ಪ್ರಶ್ನೆಯಿಂದಲೇ ಇದು ಉದ್ಭವವಾಗಿರುವುದು. Global Investment Meet 2010 ರಲ್ಲಿ MoU

ಆದದ್ದು 333 ಉದ್ದಿಮೆಗಳು, ಬಂದಿದ್ದು ಕೇವಲ 83. ಬಂಡವಾಳ ಹೂಡಿಕೆ 3 ಕೋಟಿ 92 ಲಕ್ಷ ರೂಪಾಯಿ ಎಂದು ಹೇಳಿದರು. ಆದರೆ, ಬಂದದ್ದು 32 ಸಾವಿರ 957 ಕೋಟಿ ರೂಪಾಯಿ ಮಾತ್ರ. ಉದ್ಯೋಗ 7 ಲಕ್ಷ 27 ಸಾವಿರ ಕೊಡುತ್ತೇವೆಂದರು. ಕೇವಲ 93 ಸಾವಿರ ಉದ್ಯೋಗ ಆಯಿತು. GIM-12 ನಲ್ಲಿ 245 ಉದ್ದಿಮೆಗಳಿಗೆ MoU ಆಯಿತು. ಉದ್ದಿಮೆ ಬಂದಿದ್ದು ಕೇವಲ 39. ಬಂಡವಾಳ ಹೂಡಿಕೆ ಒಡಂಬಡಿಕೆಯಾಗಿದ್ದು 2 ಲಕ್ಷ 81 ಸಾವಿರ ಕೋಟಿ ರೂಪಾಯಿ. ಆದರೆ, ಬಂಡವಾಳ ಬಂದಿದ್ದು ಕೇವಲ 12,468 ಕೋಟಿ ರೂಪಾಯಿ. Sorry. 13 ಲಕ್ಷ 99 ಸಾವಿರ, ಉದ್ಯೋಗ ಸೃಷ್ಠಿಯಾದುದು 21,790. GIM ಗೆ ಎಷ್ಟು ಖರ್ಚು ಮಾಡಿದ್ದಾರೆಂದರೆ, ರಾಜ್ಯ ಸರ್ಕಾರದಿಂದ GIM-10 ರಲ್ಲಿ ಖರ್ಚು ಮಾಡಿದ್ದು 32 ಕೋಟಿ 31 ಲಕ್ಷ 86 ಸಾವಿರದ 193 ರೂಪಾಯಿ. GIM-12ಗೆ 32 ಕೋಟಿ 50 ಲಕ್ಷ 77 ಸಾವಿರದ 782 ರೂಪಾಯಿ ಖರ್ಚು ಮಾಡಿದ್ದಾರೆ. ಅಂದರೆ ಹೆಚ್ಚು ಕಡಿಮೆ 32–33 ಕೋಟಿ ರೂಪಾಯಿಗಳನ್ನು, ಎರಡೂ ಸೇರಿ 65 ಕೋಟಿ ರೂಪಾಯಿ ಖರ್ಚಾಯಿತು. ಆದರೆ, ಉದ್ದಿಮೆಗಳು ಬರಲಿಲ್ಲ.

ಅಧ್ಯಕ್ಷರು:– ಏತಕ್ಕೆ ಖರ್ಚಾಯಿತು?

ಶ್ರೀ ಬಸವರಾಜ ರಾಯರೆಡ್ಡಿ:– Function ಮಾಡಲಿಕ್ಕೆ ಆಯಿತು.

ಶ್ರೀ ವೈ.ಎಸ್.ವಿ. ದತ್ತಾ:– ಒಂದೊಂದು ಊಟದ rate ಕೇಳಿದರೆ ನೀವು ಗಾಬರಿಯಾಗಿ ಬಿಡುತ್ತೀರಿ.

ಅಧ್ಯಕ್ಷರು:– ಆಯಿತು.

ಶ್ರೀ ಬಸವರಾಜ ರಾಯರೆಡ್ಡಿ:– ಇದು ನಾನು ಕೊಟ್ಟಂಥ figure ಅಲ್ಲ. ಅವರ ಇಲಾಖೆಯವರು ಕೊಟ್ಟಿದ್ದು. ಖರ್ಚಾಯಿತು. ಖರ್ಚಾದ ಬಗ್ಗೆ ಅಲ್ಲಿ ಭ್ರಷ್ಟಾಚಾರ ಆಗಿದೆ ಎಂದು ನಾನೇನೂ ಹೇಳುವುದಿಲ್ಲ. ಊಟ ತಿಂಡಿ ಮಾಡಿರಬಹುದು, ಮಜಾ ಮಾಡಿ ಹೋಗಿದ್ದಾರೆ. ಆಯಿತು. ಇದಾದ ಮೇಲೆ GIM-10ರಲ್ಲಿ ನಾನು ಹೇಳಿದ ಹಾಗೆ, ಹಲವಾರು ಕಂಪನಿಗಳು ಬಾಗವಹಿಸಿದವು. ಅದರಲ್ಲಿ ಮುಖ್ಯವಾಗಿ ಹೆಚ್ಚಾಗಿ MoU ಆದದ್ದು ಯಾವುವು

ಎಂದರೆ, Steel, ಎರಡನೆಯದು Energy, ಮೂರನೆಯದು Cement. ಆದರೆ, ಬಹುತೇಕ ಕಂಪನಿಗಳು MoU ಅನ್ನು ಮಾಡಿಕೊಂಡು ಹಿಂದಿನ ಸರ್ಕಾರ ಯಾವ ಉದ್ದೇಶದಿಂದ land ಅನ್ನು ಉದ್ದಿಮೆದಾರರಿಗೆ ಕೊಟ್ಟಿತ್ತು, ಆ land ನ ಸದ್ಬಳಕೆಯಾಗಿದೆಯೇ? ಅದನ್ನು ಇವತ್ತು ನಮ್ಮ ಸರ್ಕಾರ ವಿಚಾರ ಮಾಡಬೇಕು.

ಅಧ್ಯಕ್ಷರು:– ನಿಮ್ಮ ಪ್ರಕಾರ ಅದೇನು?

ಶ್ರೀ ಬಸವರಾಜ ರಾಯರೆಡ್ಡಿ:– ನಮ್ಮ ಸರ್ಕಾರ ವಿಚಾರ ಮಾಡಬೇಕು.

ಅಧ್ಯಕ್ಷರು:– ನಿಮ್ಮ assessment ನಲ್ಲಿ.

ಶ್ರೀ ಬಸವರಾಜ ರಾಯರೆಡ್ಡಿ:– ನನ್ನ assessment ಎಂದರೆ ಇದು real estate ದಂಧೆಯಾಗಿದೆ.

ಅಧ್ಯಕ್ಷರು:– ಉದ್ಯೋಗ ಮಾಡಿದ್ದು.....

ಶ್ರೀ ವೈ.ಎಸ್.ವಿ. ದತ್ತಾ:– ಅದಕ್ಕೆ ಮುಂಚೆ, ರಾಯರೆಡ್ಡಿಯವರೆ, ನೀವು ಒಳ್ಳೆಯ figures ಕೊಡುತ್ತಿದ್ದೀರಿ. Years ಹೇಳುತ್ತಿದ್ದೀರಿ. Actual ಆಗಿ GIM ಎನ್ನುವ ಪರಿಕಲ್ಪನೆ ಬಂದಿದ್ದು 2002 ರಿಂದ 2004ರವರೆಗೆ. ಆಗಿನ ಸರ್ಕಾರದಲ್ಲಿ first time GIM ಅನ್ನುವುದು ನಡೆದಿದ್ದು. ಆಗ ಎಷ್ಟು MoU ಆಯಿತು? ಆ statistics ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು:– ನೀವು ಕೊಡಿ.

ಶ್ರೀ ಬಸವರಾಜ ರಾಯರೆಡ್ಡಿ:– ಇದ್ದರೆ ಕೊಡುತ್ತೇನೆ. ನಾನು ಕಳೆದ 10 ವರ್ಷಗಳಿಂದ ಮಾಡಲಿಕ್ಕೆ ಶುರು ಮಾಡಿದ್ದೇನೆ. ಅದನ್ನೂ ತೆಗೆಯೋಣ. ಬೇಕಾದರೆ ಕೊಡಲಿ. ಮಾನ್ಯ ಮುಖ್ಯಮಂತ್ರಿಯವರು ಅದರ ಬಗ್ಗೆಯೂ ವಿಚಾರ ಮಾಡಲಿ. ನನ್ನದೇನೂ ತಪ್ಪಿಲ್ಲ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ರಾಯರೆಡ್ಡಿಯವರೆ, ಸರ್ಕಾರ ಬಂದು ಇನ್ನು 2–3 ತಿಂಗಳು ಆದರೆ 2 ವರ್ಷ ಆಗುತ್ತದೆ. ಇಲ್ಲಿಯವರೆಗೆ ಎಷ್ಟಾಗಿದೆ, ಎಷ್ಟು industry ಬಂದಿವೆ ಎಂದು ಹೇಳಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ನಾನು ಪ್ರಾರಂಭದಲ್ಲಿಯೇ ಹೇಳಿದೆ.

ಶ್ರೀ ಜಗದೀಶ್ ಶೆಟ್ಟರ್:– GIM ಮಾಡುವುದು ಬೇಡ, ಏನೂ ಬೇಡ. Industry ಯೂ ಬೇಡ, ಆ ಪರಿಸ್ಥಿತಿ ಈಗ ಬಂದಿದೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಶೆಟ್ಟರ್‌ರವರೆ, ಪ್ರಾರಂಭದಲ್ಲಿಯೇ ನಾನೇನು ಹೇಳಿದೆ, ಹೊಸ ಪಾಲಿಸಿಯನ್ನು ಮಾನ್ಯ ಮುಖ್ಯಮಂತ್ರಿಯವರು ಬಹಳ ಚೆನ್ನಾಗಿ ತಂದಿದ್ದಾರೆ.

ಅಧ್ಯಕ್ಷರು:– ಆಮೇಲೆ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ:– He has given a best policy. ಆದರೆ, Industry ಗಳು ಬರುತ್ತಿಲ್ಲ. ಇದರ ಬಗ್ಗೆ ಚಿಂತನೆಯಾಗಬೇಕೆಂದು ನಾನು ಮೊದಲೇ ಹೇಳಿಯೇ ಮಾಡಿದ್ದೇನೆ. Best policy has given. ಈ ತರಹ policy ಬೇರೆ ಯಾವ ರಾಜ್ಯದಲ್ಲೂ ಕೊಟ್ಟಿಲ್ಲ. Even ಗುಜರಾತ್‌ನಲ್ಲೂ ಈ ತರಹ policy ಇಲ್ಲ.

ಅಧ್ಯಕ್ಷರು:– Book ಚೆನ್ನಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ:– Industry ಬಂದಿಲ್ಲವೆಂದು ಹೇಳಿದೆ. ನೋಡೋಣ. ಕಾಲಾವಕಾಶ ಕೊಡೋಣ.

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು):– ಏನೂ ಗೊತ್ತಿಲ್ಲದೇ ಬಂದಿಲ್ಲವೆಂದು ಹೇಳುವುದಕ್ಕೆ ಹೋಗಬೇಡಿ. Karnataka still it is been considered as one of the best destination of this Country. ಸುಮ್ಮನೆ

statistics ತೆಗೆದುಕೊಳ್ಳಿ. ಬೇಕಾದಷ್ಟು ಜನರು ಬರುತ್ತಿದ್ದಾರೆ. ಸುಮ್ಮನೆ ಏನೂ ಇಲ್ಲದೆ, ಬಂದಿಲ್ಲ ಎನ್ನಬೇಡಿ. ಹಿಂದೆ ಬಂದಿಲ್ಲದೇ ಇರಬಹುದು. I am telling you, in this Government.

ಶ್ರೀ ಜಗದೀಶ್ ಶೆಟ್ಟರ್:– ನಿಮ್ಮ ಸರ್ಕಾರದಲ್ಲಿ ಬಂದಿಲ್ಲ. ದಾಖಲೆ ಇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಶಿವಕುಮಾರ್‌ರವರೆ, ನೀವು ತೆಗೆದು ಕೊಡಿ.

ಅಧ್ಯಕ್ಷರು:– ಆಯಿತು.

ಶ್ರೀ ಡಿ.ಕೆ. ಶಿವಕುಮಾರ್:– Reply ಕೊಡುವಾಗ ಕೊಡುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಎಷ್ಟು industry ಬಂದಿವೆ, ಎಷ್ಟು ಹಣ, ಎರಡು ವರ್ಷಗಳಲ್ಲಿ ಏನಾಗಿದೆ ಹಣೆಬರಹ ಹೇಳಿ.

ಶ್ರೀ ಡಿ.ಕೆ. ಶಿವಕುಮಾರ್:– ಏನು ಇಲ್ಲವೆಂದು ಹೇಳುವುದಕ್ಕೆ ಹೋಗಬೇಡಿ.

ಅಧ್ಯಕ್ಷರು:– ಆಯಿತು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:– Investment ಮಾಡುವುದಕ್ಕೆ ಎಷ್ಟು ಜನರು ಬರುತ್ತಿದ್ದಾರೆಂಬುದು ನಮಗೆ ಗೊತ್ತಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಬರುವುದು ಬೇರೆ. ಎರಡು ವರ್ಷಗಳಲ್ಲಿ ಏನಾಗಿದೆ ಹೇಳಿ?

ಶ್ರೀ ಡಿ.ಕೆ. ಶಿವಕುಮಾರ್:– ಈಗ ತಾನೆ ಹೊಸ policy ತಂದಿದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– policy ಯಲ್ಲ.

ಶ್ರೀ ಡಿ.ಕೆ. ಶಿವಕುಮಾರ್:– ಅಲ್ಲ ಸ್ವಾಮಿ, 30 ವರ್ಷ ಇದ್ದದ್ದನ್ನು 99 years ಗೆ ತೆಗೆದುಕೊಂಡು ಬಂದಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:– Policy ಬಂದ ಮೇಲೆ ತರಬೇಕೆಂದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನೀವು encourage ಮಾಡಲಿಲ್ಲ. Hero Motors ಹೋಯಿತಲ್ಲ?

(ಗೊಂದಲ)

ಅಧ್ಯಕ್ಷರು:– ಶಿವಕುಮಾರ್‌ರವರೆ, ಉತ್ತರ ಹೇಳುವಾಗ ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನೀವೇನೂ response ಮಾಡಲಿಲ್ಲ, ಆಂಧ್ರಪ್ರದೇಶಕ್ಕೆ Hero Motors ಹೋಯಿತು. ಏನಾಯಿತು ಎಂದು ಹಣೆಬರಹ ಗೊತ್ತಲ್ಲ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:– I want to make his records right. ಯಾರೂ ಬಂದಿಲ್ಲವೆಂದಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಉತ್ತರ ಕರ್ನಾಟಕಕ್ಕೆ Hero Motors ಬರುವುದಿತ್ತು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:– ಹಿಂದೆ ಬರುವುದಕ್ಕಾಗಿಲ್ಲದೇ ಇರಬಹುದು. ನಿಮ್ಮ ಸರ್ಕಾರದಲ್ಲಿ ಯಾರೂ ಬರುವುದಕ್ಕಾಗಿಲ್ಲವೇ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಹೋಯಿತಲ್ಲ. ನಿಮ್ಮ neglect ನಿಂದ ಹೋಯಿತು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:– ಈ ಸರ್ಕಾರದಲ್ಲಿ ತರುತ್ತಿದ್ದೇವೆ, ಬರುತ್ತಿದೆ.

ಅಧ್ಯಕ್ಷರು:– ಉತ್ತರ ಹೇಳಬೇಕಾದರೆ ಹೇಳಿ. ಬೇಗ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ:– ನಾನು ಈಗಾಗಲೇ ಮಾತನಾಡುತ್ತಿದ್ದೆ. GIM-10 ರಲ್ಲಿ ಬ್ರಹ್ಮಣಿ Industry ಯವರಿಗೆ ಬಳ್ಳಾರಿಯಲ್ಲಿ 5 ಸಾವಿರ ಎಕರೆ ಕೊಟ್ಟರು. ನನಗೆ ಗೊತ್ತಿರುವ ಹಾಗೆ, ಈಗಾಗಲೇ 5 ಸಾವಿರ ಎಕರೆಯನ್ನು ಸರ್ಕಾರ ಎಕರೆಗೆ 5 ಲಕ್ಷ ರೂಪಾಯಿಗಳ ಹಾಗೆ acquire ಮಾಡಿದೆ. Steel industry ಬರಲಿಲ್ಲ. ಆ land ಅನ್ನು 25 ಲಕ್ಷ ರೂಪಾಯಿಗಳಿಗೆ ಬೇರೆಯವರಿಗೆ ಮಾರಿಬಿಟ್ಟರು. ರೈತರದ್ದು 5 ಲಕ್ಷ ರೂಪಾಯಿಗಳಿಗೆ ತೆಗೆದುಕೊಂಡರು, 5 ಸಾವಿರ ಎಕರೆಯನ್ನು 25 ಲಕ್ಷ ರೂಪಾಯಿಗಳಿಗೆ ಮಾರಿದರು. ಎಷ್ಟು ಲಾಭವಾಯಿತು ದಯವಿಟ್ಟು ಯೋಚನೆ ಮಾಡಿ.

ಅಧ್ಯಕ್ಷರು:– ಆ ರೀತಿ ಮಾರುವುದಕ್ಕೆ ಅಧಿಕಾರ ಇದೆಯೇ?

ಶ್ರೀ ಬಸವರಾಜ ರಾಯರೆಡ್ಡಿ:– ಇಲ್ಲ. ಅದನ್ನೆ ಹೇಳುತ್ತೇನೆ. ಯಾವ ಉದ್ದೇಶಕ್ಕಾಗಿ ಎಂದು ಹೇಳುತ್ತೇನೆ.

ಅಧ್ಯಕ್ಷರು:– ಆ ಪ್ರಶ್ನೆ ಹಾಕಿ. ಉತ್ತರ ಅವರು ಹೇಳುತ್ತಾರೆ. ಹಾಗೆ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ:– ಅದಕ್ಕೇ ಬರುತ್ತಿದ್ದೇನೆ.

ಶ್ರೀ ವೈ.ಎಸ್.ವಿ. ದತ್ತಾ:– MoU ಮಾಡಿಕೊಂಡ ಕಂಪನಿ MoU ಯಿಂದ MoU ಆಚೆ ಬಂದಿದ್ದೇನೆ ಎಂದು ಹೇಳಿತು. ಆದರೂ 5 ಸಾವಿರ ಎಕರೆ ತೆಗೆದುಕೊಂಡಿತ್ತು.

ಅಧ್ಯಕ್ಷರು:– ಆಯಿತು, ನೀವು ತೆಗೆದುಕೊಳ್ಳಬಹುದಿತ್ತು ಯಾರು ಬೇಡ ಎಂದವರು.

ಶ್ರೀ ಬಸವರಾಜ ರಾಯರೆಡ್ಡಿ:– ಈಗ ಮಾರಾಟವಾಗಿದೆ ಎಂದು ಹೇಳಿಗೊತ್ತಾಗಿದೆ. ಯಾರೋ ಬಾಂಬೆಯವರು. ಅವರ ಹೆಸರು ಹೇಳುವುದು ಬೇಡ. ಮಾರಾಟವಾಗಿದೆ. ಅದರ ಬಗ್ಗೆ ಸರ್ಕಾರ ಆ 5 ಸಾವಿರ ಎಕರೆಯನ್ನು ಯಾವ ಉದ್ದೇಶಕ್ಕಾಗಿ ಅಲ್ಲಿ ಬ್ರಹ್ಮಿಣಿ steel factory ಹಾಕಬೇಕಾಗಿತ್ತು. ಅದರ ಸದುದ್ದೇಶವಾಗಿದೆಯೇ, ಹೇಗೆ? ಆಗದೇ ಇದ್ದರೆ ವಾಪಸ್ ತೆಗೆದುಕೊಳ್ಳುತ್ತೀರೋ, ಹೇಗೆ? ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು. ಇದೇ ತರಹ ಯಾವ್ಯಾವ factory ಗಳಿಗೆ ಕೊಟ್ಟಿದ್ದಾರೆ? ಹೊಸದುರ್ಗ ತಾಲ್ಲೂಕಿನಲ್ಲಿ Reliance Cement ಗೆ 2.5 ಸಾವಿರ ಎಕರೆ, ಏನಾಯಿತೆಂದು ಗೊತ್ತಾಗಲಿಲ್ಲ. Mostly, ಅವರು ಮಾಡಬಹುದೇನೋ, ನೋಡೋಣ. ಅದರ ಬಗ್ಗೆ ಹೇಳಲಿ. Aradhya Steel Private Limited ಗೆ 980 ಎಕರೆ. Juwari Fertilizers ಅವರು ಹೊರಟುಹೋದರೆಂದು ಕಾಣುತ್ತದೆ. ಆದರೆ, land ಏನಾಯಿತು? ಅವರು ಬಿಟ್ಟು ಹೋದರು. ಅವರು ಬರಲಿಲ್ಲ. Juwari factory ವಾಪಸ್ ಹೋಯಿತು. 950 acres ಏನಾಯಿತೆಂದು ಗೊತ್ತಿಲ್ಲ. ಸುರಾನಾ industries ಗೆ 1680 ಎಕರೆ. Surana Power Limited, ರಾಯಚೂರಿನಲ್ಲಿ Thermal Power Station ಹಾಕುತ್ತೇವೆಂದರು, ಅವರಿಗೆ 600 ಎಕರೆ. PM Energyಗೆ 770 acres. PMB Metallics ಗೆ 1 ಸಾವಿರ ಎಕರೆ. Bhushan Steels ಇವರಿಗೆ 2 ಸಾವಿರ ಎಕರೆ. Sorry, 4 ಸಾವಿರ ಎಕರೆ. ಜಿಂದಾಲ್‌ನವರು mostly ಮಾಡಿರಬಹುದು ಎಂದು ತಿಳಿದುಕೊಂಡಿದ್ದೇನೆ. 1150 ಕೊಟ್ಟಿದ್ದೀರಿ. ಅದೂ check ಆಗಲಿ. ಆಮೇಲೆ ಹಾವೇರಿ ಜಿಲ್ಲೆಯಲ್ಲಿ TATA ದವರಿಗೆ 2.5 ಸಾವಿರ ಎಕರೆ ಕೊಟ್ಟಿದೆ. TATA ದವರು ಮಾರುವುದಿಲ್ಲವೆಂದು ಅವರ ಬಗ್ಗೆ ಏನೂ ಇಲ್ಲ. TATA is one of the good

company. India ದಲ್ಲಿ highest steel production ಮಾಡುತ್ತಾರೆ. land ತೆಗೆದುಕೊಂಡರಲ್ಲ, ಅಲ್ಲಿ agriculture GDP loss ಆಯಿತಲ್ಲ. ಹೋಗಲಿ. ಆಮೇಲೆ, Shree Renuka Infrastructure ಗೆ 1100 ಎಕರೆ. Raveendra Trading ಗೆ 650 ಎಕರೆ. Shree Cement Limited. ಹೀಗೆಲ್ಲ ಬಹಳಷ್ಟು ಇದೆ. Luxor Energy ಯವರಿಗೆ 900 ಎಕರೆ. ಕಲಾವತಿ Ispat ಗೆ 580 ಎಕರೆ. Delta Thermal Power ಗೆ 700 ಎಕರೆ. Kasturi Energy ಗೆ 400 ಎಕರೆ. Gupta Energy ಗೆ 1350 ಎಕರೆ. Bharat Forge ಗೆ 300 ಎಕರೆ. Arcelor Mittal ಗೆ 4 ಸಾವಿರ ಎಕರೆ. ಈಗಾಗಲೇ ಅವರು ತೆಗೆದುಕೊಂಡಿದ್ದಾರೆ. ಕೆಲಸ ಪ್ರಾರಂಭವಾಗಿಲ್ಲ. Mittal is a No.1 leading company in the world. Steel highest production ಇಲ್ಲಿ ಆಗುತ್ತದೆ. ಆದರೆ, ಇಲ್ಲೇಕೆ ಪ್ರಾರಂಭ ಮಾಡಲಿಲ್ಲ? ಮಾಡದಿದ್ದರೆ ವಾಪಸ್ land ಕೊಡಿ. ವಾಪಸ್ ತೆಗೆದುಕೊಳ್ಳಿ 4000 ಎಕರೆ. He is No.1 in the world.

ಶ್ರೀ ವೈ.ಎಸ್.ವಿ. ದತ್ತಾ:– ರಾಯರೆಡ್ಡಿಯವರೆ, ಒಟ್ಟು 1 ಲಕ್ಷದ 79 ಸಾವಿರ ಎಕರೆ ಇವತ್ತಿಗೂ land bank ಎಂದು ಮಾಡಿ ಇವರು ಕೊಟ್ಟರು.

ಶ್ರೀ ಬಸವರಾಜ ರಾಯರೆಡ್ಡಿ:– 121.

ಶ್ರೀ ವೈ.ಎಸ್.ವಿ. ದತ್ತಾ:– 4(1), 6(1) notification ಆಗಿದೆ. ರೈತರು ಪಹಣಿಯಲ್ಲಿ 1 ರೂಪಾಯಿ ಸಾಲ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ.

(ಗೊಂದಲ)

ಶ್ರೀ ಬಿ.ಎ. ಮೊಹಿದ್ದೀನ್ ಬಾವಾ:– JESCO Land ಮಂಗಳೂರಿನಲ್ಲಿ ಬೈಕಂಪಾಡಿಯಲ್ಲಿ 700 ಎಕರೆ.

ಶ್ರೀ ಈ. ತುಕಾರಾಂ:– ರೈತರಿಗೇನು ಏನು ಅನ್ಯಾಯವಾಗಿದೆ ಎಂದು ಅದನ್ನು ಕೂಡ ಸ್ವಲ್ಪ ಹೇಳಿ.

ಅಧ್ಯಕ್ಷರು:– ಆಯಿತು. ನೀವು ಕೇಳಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ನೀವು ಆ ಜಿಲ್ಲೆಯವರು.

ಶ್ರೀ ಈ. ತುಕಾರಾಂ:– ಅಲ್ಲಿ ಬಹಳ ದುಸ್ಥಿತಿ ಇದೆ.

ಶ್ರೀ ಬಸವರಾಜ ರಾಯರೆಡ್ಡಿ:– ಅವರು ಬಾಧಿತರು. GIM-12 ನಲ್ಲಿಯೂ ಕೂಡ ಜಾಗ ಕೊಡಲಾಗಿದೆ.

ಶ್ರೀ ಬಿ.ಎ. ಮೊಹಿದ್ದೀನ್ ಬಾವಾ:– JESCO land ಮಂಗಳೂರು ಅದನ್ನೂ ಅದರಲ್ಲಿ ನೀವು refer ಮಾಡಲಿಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಬಹಳ ಇವೆ. Just I quoted few examples.

ಅಧ್ಯಕ್ಷರು:– ಆಯಿತು.

ಶ್ರೀ ಬಸವರಾಜ ರಾಯರೆಡ್ಡಿ:– ನಾನು ಒಂದು ಹೇಳಲಿಲ್ಲ. ನಾನು GIM-12 ಬಗ್ಗೆ ಸವಿಸ್ತಾರವಾಗಿ ಹೇಳಲ್ಲ. ಒಂದೆರಡು quote ಮಾಡುತ್ತೇನೆ. Even GIM-12 ನಲ್ಲಿಯೂ ಕೂಡ Acme Tele Power, 2000 ಎಕರೆ. ಇಲ್ಲೇನು ಹೇಳುತ್ತಾರೆಂದರೆ, ಅವರು own land ಎಂದು ಹೇಳುತ್ತಾರೆ. Own land ಎಂದರೆ ಯಾವುದು? Section 109 of the Land Reforms Act ಪ್ರಕಾರ ಅವರಿಗೆ exempt ಮಾಡಿ ಖರೀದಿ ಮಾಡಲಿಕ್ಕೆ ಕೊಟ್ಟರು.

ಅಧ್ಯಕ್ಷರು:– Land Reforms Act.

ಶ್ರೀ ಬಸವರಾಜ ರಾಯರೆಡ್ಡಿ:– Land Reforms Act ನಲ್ಲಿ exempt ಮಾಡಿ ಅವರಿಗೆ ಖರೀದಿ ಮಾಡುವುದಕ್ಕೆ ಕೊಟ್ಟರು.

ಅಧ್ಯಕ್ಷರು:– ಖರೀದಿ ಮಾಡುವುದಕ್ಕೆ ಅವಕಾಶ ಕೊಟ್ಟರು.

ಶ್ರೀ ಬಸವರಾಜ ರಾಯರೆಡ್ಡಿ:– ಖರೀದಿ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ರೈತರ ಜಮೀನು ಹೋಯಿತಲ್ಲ? ಅಲ್ಲಿ ಕೃಷಿ ಉತ್ಪನ್ನ ಹೋಯಿತಲ್ಲ. ರಾಜ್ಯಕ್ಕೂ ಉತ್ಪನ್ನ ಹೋಯಿತು, ಆ ರೈತರ ಕುಟುಂಬಕ್ಕೂ

ಹೋಯಿತು. ಮತ್ತೆ ಅವರು ಬೇಲಿ ಹಾಕಿಟ್ಟುಕೊಂಡು ಏನು ಮಾಡಬೇಕು? ಹಲವಾರು Solar ಗಳಿಗೆ ಸುಮಾರು 10–20 ಸಾವಿರ ಎಕರೆ ಕೊಟ್ಟಿದ್ದಾರೆ. ಅವರು ಯಾರ್ಯಾರು? Solar Panel ಹಾಕುತ್ತೇವೆಂದು ಹೇಳಿದ್ದಾರಲ್ಲ, ಯಾರ್ಯಾರು? ಏನು ಮಾಡಿದ್ದಾರೆ? ದಕ್ಷಿಣ ಕನ್ನಡ Power Limited ಗೆ 1 ಸಾವಿರ ಎಕರೆ ಕೊಟ್ಟಿದ್ದಾರೆ. Own land. ಹೀಗೆ ಇಲ್ಲಿ ಬೇರೆ ಬೇರೆ ತರಹ ಅವೆಲ್ಲಾ ಗೊತ್ತಿದೆ. ಅವರ ಹತ್ತಿರ ಇವೆ. ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಈ ಎಲ್ಲಾ information ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹೀಗೆ ಬಹಳಷ್ಟು ಕಂಪನಿಗಳಿಗೆ GIM-10 and 12 ರಲ್ಲಿ land ಕೊಟ್ಟಿದ್ದಾರೆ ಅದರ ಸದ್ಬಳಕೆಯಾಗಿದೆಯೇ, ಹೇಗೆ? ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು ಮತ್ತು ಸದ್ಬಳಕೆಯಾಗದಿದ್ದರೆ ಆ land ಅನ್ನು ವಾಪಸ್ ತೆಗೆದುಕೊಳ್ಳುತ್ತೀರಾ ಎಂಬುದನ್ನು ತಿಳಿಸಬೇಕು. ಇದಾದಮೇಲೆ, ಉದ್ದಿಮೆ ಮತ್ತು ಕೈಗಾರಿಕೆ ಬರಲಿ ಎಂದು ದೃಷ್ಟಿಕೋನ ಇಟ್ಟುಕೊಂಡು Karntaka Industrial Development Board ಇದೆ. KIDB ಈಗ 1 ಲಕ್ಷ 21 ಸಾವಿರ 286 ಎಕರೆ land acquisition ಮಾಡಲಿಕ್ಕೆ ವಿವಿಧ ಹಂತದಲ್ಲಿವೆ. ಅದರಲ್ಲಿ ಈಗಾಗಲೇ ಸುಮಾರು 42 ಸಾವಿರ ಎಕರೆಯನ್ನು acquire ಮಾಡಿಕೊಂಡಿದ್ದಾರೆ. ಇನ್ನುಳಿದಂಥ ಜಮೀನು ವಿವಿಧ ಹಂತದಲ್ಲಿವೆ. Industry ಗಳಿಗೆ ಕೊಡಲಿಕ್ಕೆ ಇಷ್ಟೆಲ್ಲ land ಅನ್ನು ತೆಗೆದುಕೊಳ್ಳಲಿಕ್ಕೇನು ಹೊರಟಿದ್ದೀರಿ, industry ಗಳು ಬರುತ್ತಿಲ್ಲ. Land Bank ಸ್ಥಾಪನೆ ಮಾಡಿ, land deposit ಏಕೆ ಮಾಡಿಕೊಳ್ಳುತ್ತಿದ್ದೀರಿ? ಅದು ಗೊತ್ತಾಗಬೇಕಲ್ಲ. ಅಲ್ಲಿ ರೈತರಿಗೆ ಅನ್ಯಾಯ. KIDB ಇವತ್ತು 3 ಸಾವಿರ ಕೋಟಿ loss ನಲ್ಲಿದೆ. ಸುಮಾರು 3 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು loss ಇದೆ. ಏಕೆಂದರೆ, land compensation ಕೊಡಬೇಕು. ಆ land ಕೊಟ್ಟು industry start ಆಗದಿದ್ದರೆ ಅವರಿಗೆ ಹಣ ಬರುವುದಿಲ್ಲ. ಮುಂದೆ KIDB ಯನ್ನು ಮುಚ್ಚುತ್ತೀರಾ?

ಶ್ರೀ ಶಿವಾನಂದ ಎಸ್.ಪಾಟೀಲ್:– ನಾನೇ ಕೇಳಿದ್ದೆ ಸಾರ್. Bus stand ಗೆ 2 ಎಕರೆ land ಅನ್ನು Revenue Act ನಲ್ಲಿ acquire

ಮಾಡುವುದಕ್ಕಾಗುತ್ತಿಲ್ಲ. ಆದರೆ, KIDB ಯವರು ಸಾವಿರಾರು ಎಕರೆಗೆ notification ಮಾಡುತ್ತಿದ್ದಾರೆ.

ಅಧ್ಯಕ್ಷರು:– ನಿಮ್ಮದು 10 ವರ್ಷ ಆಗಿರಬೇಕಲ್ಲ?

ಶ್ರೀ ಶಿವಾನಂದ ಎಸ್. ಪಾಟೀಲ್:– 6–7 ವರ್ಷವಾಯಿತು.

ಶ್ರೀ ಬಿ.ಆರ್. ಪಾಟೀಲ್:– ರಾಯರೆಡ್ಡಿಯವರೆ, ಸ್ವಲ್ಪ ಗೋಲ್‌ಮಾಲ್ ಗೊತ್ತಿದೆ ಹೇಳಬಹುದೆ?

ಅಧ್ಯಕ್ಷರು:– ಆಮೇಲೆ ಹೇಳಿ. Time ಇಲ್ಲ. ಅವರು ಪೂರೈಸಲಿ.

ಶ್ರೀ ಬಿ.ಆರ್. ಪಾಟೀಲ್:– ರಾಜ್ಯದ್ದು ಹೇಗೆ ಲೂಟಿ ನಡೆಯುತ್ತಿದೆ ಎಂದು ಹೇಳುತ್ತೇನೆ.

ಅಧ್ಯಕ್ಷರು:– ಆಗ ನಿಮ್ಮ ಮಾತಿನಲ್ಲೇಕೆ ಹೇಳಲಿಲ್ಲ.

ಶ್ರೀ ಬಿ.ಆರ್. ಪಾಟೀಲ್:– ನಾನು ಸ್ವಲ್ಪ ಬಿಚ್ಚಿ ಹೇಳುತ್ತೇನೆ KIADBದು ಒಂದು ಗ್ಯಾಂಗ್ ಇದೆ ಸಾರ್.

ಅಧ್ಯಕ್ಷರು:– ನೀವು ಮಾತನಾಡುವಾಗ ಏಕೆ ಹೇಳಲಿಲ್ಲ. ಬೇರೆ ರೂಪದಲ್ಲಿ ಪ್ರಶ್ನೆ ಕೇಳಿ ಚರ್ಚೆಗೆ ಅವಕಾಶ ಕೊಡೋಣ. ಅದರಲ್ಲೇನು? ಚರ್ಚೆ ಮಾಡೋಣ.

ಶ್ರೀ ಬಸವರಾಜ ರಾಯರೆಡ್ಡಿ:– KIADB ಇಷ್ಟೊಂದು landಅನ್ನು acquire ಮಾಡಿಕೊಂಡು deposit ಮಾಡಲಿಕ್ಕೆ ಏನು ಹೊರಟಿದ್ದಾರೆ, ಇದರಿಂದ ಪ್ರಯೋಜನವೇನು? ಅದರಲ್ಲೇನು ನಾನು ಈಗಾಗಲೇ land audit ಮಾಡಿ ಎಂದು ಹೇಳಿದ್ದೆನಲ್ಲ. ಅದರ ಬಗ್ಗೆ ಒಂದು ಶ್ವೇತಪತ್ರ ತನ್ನಿ ಎಂದು ಹೇಳಿಬಿಟ್ಟೆ. ಈ land ಅನ್ನು ಉದ್ದಿಮೆದಾರರಿಗೆ ಕೊಟ್ಟ ಮೇಲೆ ಅವರು ಉದ್ದಿಮೆ ಸ್ಥಾಪನೆ ಮಾಡಲಿಕ್ಕೆ ಆಗದಿದ್ದರೆ ರೈತರಿಗೆ land ಅನ್ನು ವಾಪಸ್ ಕೊಡುತ್ತೀರಾ? ಏಕೆಂದರೆ ಅಲ್ಲಿ agriculture ಉತ್ಪನ್ನ ಬರುತ್ತದೆ. ಅದರ ಬಗ್ಗೆ ಹೇಳಬೇಕಾಗುತ್ತದೆ.

ಅಧ್ಯಕ್ಷರು:– ಅವರು ಮುಗಿಸಲಿ ಬಿಡಿ, ಎರಡು ಗಂಟೆ ಆಯಿತು.

ಶ್ರೀ ವೈ.ಎಸ್.ವಿ. ದತ್ತಾ:– ಮತ್ತೆ ಅವರು Supreme Court ಗೆ ಹೋಗುತ್ತಾರೆ. ಅಲ್ಲಿ ರೈತರಿಗೆ ವಾಪಸ್ ಬರುವ ಪ್ರಶ್ನೆನೇ ಇಲ್ಲದ ಹಾಗೆ ಮಾಡಿಟ್ಟಿದ್ದಾರೆ.

ಶ್ರೀ ಬಿ.ಎ. ಮೊಹಿದ್ದೀನ್ ಬಾವ:– ಮಾನ್ಯ ದತ್ತಾರವರು ಹೇಳಿದ್ದು ಸರಿ ಇದೆ ಸಾರ್. ನಮ್ಮ ಮಂಗಳೂರಿನದ್ದು ಏನಾಗಿದೆ ಎಂದರೆ, 14 ವರ್ಷಗಳಿಂದ ಜೆಸ್ಕೋದವರದ್ದು Court ನಲ್ಲಿದೆ. ಅಲ್ಲಿ ಕೇಳಿದರೆ Court ನಲ್ಲಿ sort out ಆಗುವುದು ಯಾವಾಗ ಗೊತ್ತಿಲ್ಲವೆಂದು ಹೇಳುತ್ತಾರೆ.

ಅಧ್ಯಕ್ಷರು:– ಅಲ್ಲಿ ಡೆಲ್ಲಿಯಲ್ಲಿ ಒಂದಕ್ಕಿಂತ ನಾಲ್ಕು ಜನ ಇದ್ದಾರಲ್ಲ ಅವರನ್ನು ಕೇಳಿ ನೋಡಿ.

ಶ್ರೀ ಬಸವರಾಜ ರಾಯರೆಡ್ಡಿ:– ತಾವು ಈಗೇನು ಹೊಸ ಪಾಲಿಸಿ ತಂದಿದ್ದೀರಿ ಇದು ಬಹಳ ಸಂತೋಷದ ವಿಚಾರ, ಒಳ್ಳೆಯ ಪಾಲಿಸಿ ತಂದಿದ್ದೀರಿ. ಆದರೆ, ಕೇವಲ ಪುಸ್ತಕದಲ್ಲಿ ಪಾಲಿಸಿ ತಂದು incentives ಕೊಟ್ಟು value added tax ನ್ನು ಹತ್ತು ವರ್ಷ interest free ಎಲ್ಲಾ ಕೊಟ್ಟಿದ್ದೀರಿ. ಆದರೆ, industries ಬರಲಿಕ್ಕೆ simplification ಆಗಬೇಕು. ಇವತ್ತು ಏನಾಗಿದೆ ಎಂದರೆ, ಒಬ್ಬ ಉದ್ದಿಮೆದಾರ ಇಲ್ಲಿ ಬಂದರೆ, 30 clearances ಆಗಬೇಕು. ಒಂದು ಉದ್ದಿಮೆ ಸ್ಥಾಪನೆ ಆಗಬೇಕಾದರೆ 30 clearances various department ನಿಂದ ಆಗಬೇಕು. ಆ clearance ಗಾಗಿ ಅಲ್ಲಿ ನಡೆಯುತ್ತಿರುವಂಥ ಭ್ರಷ್ಟಾಚಾರ, harassment ನಿಂದ ಬರುತ್ತಿಲ್ಲ. ಇದರ ಬಗ್ಗೆ simplification ಮಾಡದಿದ್ದರೆ. ಉದ್ದಿಮೆಗಳು ರಾಜ್ಯದಲ್ಲಿ ಬರುವುದಿಲ್ಲ. Single window clearance ಇದೆ. But ಏನೂ ಪ್ರಯೋಜನವಿಲ್ಲ. In the name of single window clearance, ಇದನ್ನೆಲ್ಲಾ 30ರ ಕೆಳಗಡೆ ಇಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನ ಹರಿಸಿದರೆ industries ಬರುವುದಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ಹೇಳುತ್ತೇನೆ. Hero Honda factory ಆಂಧ್ರ ಪ್ರದೇಶಕ್ಕೆ ಹೋಯಿತು ಎಂದು ಎಲ್ಲಾ ವಿರೋಧ ಪಕ್ಷದವರು ಹೇಳಿದರು.

ಅದರಲ್ಲಿ ಮುಖ್ಯಮಂತ್ರಿಗಳದ್ದು ತಪ್ಪು ಇಲ್ಲ, ಇದರಲ್ಲಿ ಏನಾಗಿದೆ ಎಂದರೆ,

ಅಧ್ಯಕ್ಷರು:– ನೋಡಿ ಈಗ ನಿಮ್ಮ ಪ್ರಶ್ನೆ ಇದೆಯಲ್ಲ ಆ ಪ್ರಶ್ನೆಗೆ ಸೀಮಿತವಾಗಿ ಮಾತನಾಡಿ. ಮಿಕ್ಕ ವಿಚಾರಗಳನ್ನು industries ಬಗ್ಗೆ ಚರ್ಚೆ ಮಾಡುವಾಗ ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ:– ಇದು ಅದಕ್ಕೆ ಸಂಬಂಧಪಟ್ಟಿದ್ದು ದಯವಿಟ್ಟು ತಾವು ಕೇಳಬೇಕು. ಆಂಧ್ರ ಪ್ರದೇಶ ಮತ್ತು ತೆಲಂಗಾಣ ಎಂಬ ಹೊಸ ರಾಜ್ಯಗಳು ಉದಯವಾಯಿತು. ನಮ್ಮಲ್ಲಿ industries ಬರಲಿ ಎಂದು Income tax exempt ಮಾಡುತ್ತೇವೆ, excise duty exempt ಮಾಡುತ್ತೇವೆಂದು ಅವರೊಂದು ಹುಯಿಲೆಬ್ಬಿಸಿದರು. ಇವತ್ತು ಕೇಂದ್ರ ಸರ್ಕಾರ ಅದಕ್ಕೆ ಕುಮ್ಮಕ್ಕು ಕೊಟ್ಟರೆ ನಾಳೆ ಯಾವ ರಾಜ್ಯಕ್ಕೂ ಕೂಡ industries ಬರುವುದಿಲ್ಲ. ಈ ತರಹ unhelathy competition ಆಗಬಾರದು. ಏಕೆ ಈ ಮಾತು ಹೇಳುತ್ತೇನೆಂದರೆ, ಹೈದರಾಬಾದ್ ಕರ್ನಾಟಕ Article 371 (J) Constitution amendment ಆಗಿದೆ. ಅಲ್ಲಿ industrial development ಆಗಬೇಕು. ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ದಿನಾಂಕ:– 29–09–2014 ರಂದು ಒಂದು letter ಬರೆಯಿತು. ಕೇಂದ್ರ ಸರ್ಕಾರದ Industries Secretary Sri Subhadhara Singh ರವರು ದಿನಾಂಕ: 28–01–2015 ಗೆ ಒಂದು letter ಬರೆಯುತ್ತಾರೆ. ಏನೆಂದರೆ, ವಿಶೇಷವಾದ ಸ್ಥಾನಮಾನ ಕೊಟ್ಟಂಥ ಹೈದರಾಬಾದ್ ಕರ್ನಾಟಕ ಏರಿಯಾದ industries ಗೆ ಕೆಲವು ರಿಯಾಯತಿಗಳನ್ನು ಕೊಡಿ ಎಂದು ರಾಜ್ಯ ಸರಕಾರಕ್ಕೆ request ಮಾಡಿ ಪತ್ರ ಬರೆಯುತ್ತಾರೆ. Government of India has turned down the request. ಅವರು ಏನು ಹೇಳುತ್ತಾರೆಂದರೆ, "The Hyderabad-Karnataka region and district of North Karantaka does not qualify as per the criteria given above. Therefore it may not be possible to give special package of industrial incentives to the requested region of Karnataka". ರಾಜ್ಯ ಸರ್ಕಾರ ಉತ್ತರ ಕರ್ನಾಟಕಕ್ಕೆ ಮತ್ತು ಹೈದರಾಬಾದ್ ಕರ್ನಾಟಕಕ್ಕೆ ಕೆಲವು special incentive criteria ಕೊಡಿ, ಯಾವ್ಯಾವುದು ಎಂದು ಅವುಗಳನ್ನು ಹೇಳಿದ್ದಾರೆ. ಇದನ್ನು ಕೇಂದ್ರ ಸರ್ಕಾರ turned down

ಮಾಡಿದೆ. ಹೀಗಾಗಿ Hero Honda factory ಹೋಗಲಿಕ್ಕೆ ಕಾರಣ ಇರಬಹುದೇ ಹೊರತು ಇದನ್ನು ಕೇಂದ್ರ ಸರ್ಕಾರ ಗಮನಿಸಬೇಕು. ಕೇಂದ್ರ ಸರ್ಕಾರ ಉತ್ತರ ಕರ್ನಾಟಕಕ್ಕೆ ಕೊಡಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್:– ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕೊಟ್ಟು 371 ಗೆ amendment ಮಾಡಿ ಕೊಡುವಾಗ ಅದನ್ನೆಲ್ಲಾ ಸ್ವಲ್ಪ ಸೇರಿಸಬೇಕಾಗಿತ್ತು. Article 371 ಗೆ ತಿದ್ದುಪಡಿ ಮಾಡಿದ್ದೀರಲ್ಲ ಆಗ ಇವೆಲ್ಲಾ ಸೇರಿಸಬೇಕಾಗಿತ್ತಲ್ಲವೆ? UPA ಸರಕಾರ ಇದ್ದಾಗ ಇವೆಲ್ಲಾ concessions ಕೇಳಬೇಕಾಗಿತ್ತಲ್ಲ?

(ಗೊಂದಲ)

ಅಧ್ಯಕ್ಷರು:– ಸೇರಿಸುತ್ತಾರೆ ಬಿಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– UPA ಸರಕಾರ ಇದ್ದಾಗ ನೀವು ಏಕೆ concessions ಕೇಳಲಿಲ್ಲ?

(ಗೊಂದಲ)

ಅಧ್ಯಕ್ಷರು:– ರೀ ಸಾಕು ಬಿಡಿ, ರಾಯರೆಡ್ಡಿ ನೀವು ಬೇಗ ಪೂರೈಸಿ.

(ಗೊಂದಲ)

ಶ್ರೀ ಪ್ರಿಯಾಂಕ ಎಂ. ಖರ್ಗೆ:– Article 371ಗೆ Constitutional amendment ಮಾಡಿದಾಗ Industries ಗೆ specific ಆಗಿ ಮಾಡುವುದಕ್ಕೆ ಆಗುತ್ತದೆಯೇ?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– Article 371(J) ಬರಲೇಬಾರದು ಎಂದು ಅವರು ಹೇಳಿದ್ದರು.

(ಗೊಂದಲ)

ಶ್ರೀ ಪ್ರಿಯಾಂಕ ಎಂ. ಖರ್ಗೆ:– Article 371(J) ಮೊದಲನೆಯದಾಗಿ ತಿರಸ್ಕಾರ ಮಾಡಿದ್ದು ಅವರ ಸರ್ಕಾರವೇ ಮಾನ್ಯ ಎಲ್.ಕೆ. ಅಡ್ವಾಣಿಯವರು 371(J) ಗೆ quality ಇಲ್ಲವೆಂದು ಹೇಳಿದ್ದರು.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್:– ನೀವು ಆಗ ಕೇಳಬೇಕಾಗಿತ್ತು.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ರೀ ಶೆಟ್ಟರ್‌ರವರೆ, Article 371(J) ಒಳಗೆ ಇದೆಲ್ಲಾ ಸೇರುತ್ತದೆ.

ಶ್ರೀ ಜಗದೀಶ್ ಶೆಟ್ಟರ್:– ಅವರು ಪತ್ರ ಬರೆಯುವುದು ಕೊಟ್ಟಿಲ್ಲವೆಂದು ಹೇಳುವುದು ಇದೇನಿದು?

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:– 371(J)ನಲ್ಲಿ ಆ ರೀತಿ prohibition ಇಲ್ಲ. ಕೇಂದ್ರದ ನಿಲುವು ಸರಿಯಿಲ್ಲ.

ಅಧ್ಯಕ್ಷರು:– ರೀ, ನೀವು conclude ಮಾಡಿಬಿಡಿ.

(ಗೊಂದಲ)

ಶ್ರೀ ಪ್ರಿಯಾಂಕ ಎಂ. ಖರ್ಗೆ:– Article 371 ನಲ್ಲಿ Constitutional amendment ಮಾಡಿದಾಗ Industies ಗೆ specific ಆಗಿ ಮಾಡುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಕೇಂದ್ರ ಸರಕಾರದ ಮೇಲೆ ಒತ್ತಾಯ ಮಾಡುತ್ತೇನೆ Special criteria for Northern Karnatka ಕೊಡಲಿಕ್ಕೆ ನೀವು

ಅವರಿಗೆ ಹೇಳಿ. Income tax exempt ಮಾಡಲಿಕ್ಕೆ excise duty exempt ಕೊಡಲಿಕ್ಕೆ ಅವರಿಗೆ ಹೇಳಿ.

ಅಧ್ಯಕ್ಷರು:– ರಾಯರೆಡ್ಡಿಯವರೆ ದಯವಿಟ್ಟು ಪೂರೈಸಿ.

ಶ್ರೀ ಬಸವರಾಜ ರಾಯರೆಡ್ಡಿ:– ಆಯಿತು ಇನ್ನೈದು ನಿಮಿಷದಲ್ಲಿ ಪೂರೈಸಿ ಬಿಡುತ್ತೇನೆ. ಸದನದ ಗಮನಕ್ಕೆ ನಾನು ತರಬೇಕಾಗುತ್ತದೆ.

ಅಧ್ಯಕ್ಷರು:– ನೋಡಿ ನಿಮ್ಮಲ್ಲಿ ಅನೇಕ ವಿಚಾರಗಳಿವೆ. ಅದು ಒಳ್ಳೆಯದು. ಈ ಪ್ರಶ್ನೆಗೆ ಸೀಮಿತವಾಗಿ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ:– ಈ special package ಕೊಟ್ಟರೆ ನಮ್ಮ ಭಾಗಕ್ಕೆ industries ಬರುತ್ತವೆಂದು ಹೇಳಿದೆ.

(ಗೊಂದಲ)

ಅಧ್ಯಕ್ಷರು:– ನಿಮ್ಮ ಮುಖ್ಯವಾದ ಉದ್ದೇಶ ಭೂಮಿ ಕೊಟ್ಟಿದೆ ಉಪಯೋಗ ಆಗಿಲ್ಲ, ಆ ಬಗ್ಗೆ ಏನು ಮಾಡುತ್ತೀರಿ? ಇದರಿಂದ ನಮ್ಮ ಕೈಗಾರಿಕೆ ಹಿಂದೆ ಇದೆ. ಇಷ್ಟಕ್ಕೆ ಸೀಮಿತವಾಗಿ ಹೇಳಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಅದನ್ನು ಹೇಳಿದೆ. ಕೇಂದ್ರ ಸರ್ಕಾರ ಈ ರೀತಿಯಾಗಿ ಉತ್ತರ ಕರ್ನಾಟಕಕ್ಕೆ ವಿರೋಧಿ ನೀತಿ ತಾಳಿದರೆ ಹೇಳಿ.

(ಗೊಂದಲ)

ಅಧ್ಯಕ್ಷರು:– ಆಯಿತು ಅದೆಲ್ಲಾ ಆಮೇಲೆ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ:– Industries development ಬಗ್ಗೆ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು:– ಅದು ಹೇಳಲಿಲ್ಲ, ಆಯಿತು ಬೇಗ ಮುಗಿಸಿ.

ಶ್ರೀ ಬಸವರಾಜ ರಾಯರೆಡ್ಡಿ:– ಈ ತರಹ ಕೊಡಲಿ, ರಾಜ್ಯ ಸರ್ಕಾರದ request ನ್ನು ಅವರು ಒಪ್ಪಲಿ ಎಂದು ಹೇಳಿದ್ದು. ಇನ್ನೊಂದು ಬಹಳ ಪ್ರಮುಖವಾದ ವಿಚಾರ ಇದೆ.

ಅಧ್ಯಕ್ಷರು:– ನೀವು ಬೇಗ ಪೂರೈಸಿ.

ಶ್ರೀ ಬಸವರಾಜ ರಾಯರೆಡ್ಡಿ:– ಆಯಿತು ಇನ್ನು ಮೂರು ನಿಮಿಷದಲ್ಲಿ ಮುಗಿಸುತ್ತೇನೆ. ಈ ಚೆನ್ನೈ–ಬೆಂಗಳೂರು–ಮುಂಬಯಿ ಕಾರಿಡಾರ್ ಎಂದು ಹಿಂದೆ UPA ಸರ್ಕಾರ ಇದ್ದಾಗ industrial development ನ್ನು Japan ಸಹಯೋಗದಲ್ಲಿ ಮಾಡಿತ್ತು. ಆ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಅದರ ಬಗ್ಗೆಯೂ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು, ಕೇಂದ್ರ ಸರ್ಕಾರ ಹಿಂದೆ UPA ಸರ್ಕಾರ ಏನು ಮಾಡಿದೆ, ಏಕೆಂದರೆ, ಇದು ಬಹಳ ದೊಡ್ಡ industrial corridor ಆಗಿರತಕ್ಕಂಥದ್ದು. ಅದರ ಬಗ್ಗೆ ಯಾವ ಕಾರ್ಯಕ್ರಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಸಹಯೋಗದಲ್ಲಿ ಹಾಕಿಕೊಂಡಿದೆ ಎಂಬುದನ್ನು ಸ್ಪಷ್ಟಪಡಿಸಿದರೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಿ, ನಾನು ಕೊನೆಯದಾಗಿ ಇಷ್ಟನ್ನೇ ಹೇಳುತ್ತೇನೆ, ಇನ್ನೊಂದು ಮಾತು ಹೇಳಿ ನನ್ನ ಮಾತು ಮುಗಿಸುತ್ತೇನೆ. Foreign Direct Investment ಏನು ಇದೆ, ನಮ್ಮ ರಾಜ್ಯಕ್ಕೆ ಬಹಳ ಬರುತ್ತದೆ, ನಮ್ಮ ರಾಜ್ಯಕ್ಕೆ ಬಹಳ ಬಂದಿದೆ ಎಂದು ಬಂದಿರುವುದನ್ನು ನಾನು ಕೆಲವು ಸಾರಿ ಓದಿದೆ. ಇಲ್ಲ. In FDI we are number 4. Maharastra first, second Tamil Nadu, third Gujarath, fourth ನಲ್ಲಿ ನಾವು ಇದ್ದೇವೆ. Sorry Gujarth ಐದನೇ number ನಲ್ಲಿದೆ. ಹೀಗಾಗಿ FDI ತಮಿಳುನಾಡು ಮತ್ತು ಮಹಾರಾಷ್ಟ್ರಕ್ಕೆ ಯಾವ ತರಹ ಬರುತ್ತಿದೆ, ಅಲ್ಲಿ ಜನ ಏಕೆ invest ಮಾಡುತ್ತಾರೆ? ಇಲ್ಲಿ ಏಕೆ invest ಮಾಡುವುದಕ್ಕೆ ಬರುತ್ತಿಲ್ಲ, ಅದರ ಬಗ್ಗೆಯೂ ಸರ್ಕಾರ ಯೋಚಿಸಬೇಕಾಗಿದೆ. ಎಲ್ಲಾ ಉದ್ದಿಮೆಗಳನ್ನು ಇಲ್ಲಿ ಸ್ಥಾಪನೆ ಮಾಡದೇ ಇರಲಿಕ್ಕೆ ಕಾರಣವೇನೆಂದರೆ ಇಲ್ಲಿ ಮೂಲಭೂತ ಸೌಕರ್ಯಗಳಿಲ್ಲ. ಸರಿಯಾದ ರಸ್ತೆಗಳು, electricity, ರೈಲು ಮಾರ್ಗ ಇಲ್ಲ.

ಈ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿದರೆ ಮಾತ್ರ ಸಾಧ್ಯ ಎನ್ನುವುದಕ್ಕೆ ನಾನು ಇದನ್ನು ಹೇಳಿದೆ. ಅದರ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕೆಂದು ಹೇಳಿ, ಕೊನೆಯದಾಗಿ ಈಗಾಗಲೇ ನಾನೇನು ಹೇಳಿದೆ, ಕಳೆದ 7–8 ವರ್ಷಗಳಲ್ಲಿ industries ಗೆ ನೀವೇನು land ತೆಗೆದುಕೊಂಡಿದ್ದೀರಿ, ಏಕೆ industries ಬಂದಿಲ್ಲ, ಆಮೇಲೆ ನಿಮ್ಮ ಭೂಮಿ ಕೊಟ್ಟಿದ್ದರಲ್ಲ, ಅದನ್ನು ಕಾನೂನು ಬಾಹಿರವಾಗಿ ಮಾರಿದಂತವರು, ಕಾನೂನು ಬಾಹಿರವಾಗಿ ದುರುಪಯೋಗ ಮಾಡಿದಂತವರು, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಸ್ಪಷ್ಟಪಡಿಸಬೇಕು. ತಾವೇನು ಹೊಸ industrial Policy ತಂದು ಒಳ್ಳೆಯ ಕೆಲಸ ಮಾಡಲಿಕ್ಕೆ ಹೊರಟಿದ್ದೀರಿ, ಅದಕ್ಕೆ ಪೂರಕವಾಗಿ ಏನೇನು facilities ಕೊಡುತ್ತೀರಿ? Industries ಬರುವುದರಿಂದ ನಮ್ಮ GDP ಎಷ್ಟು ಆಗುತ್ತದೆ, ಎಷ್ಟು ಜನ ನಿರುದ್ಯೋಗಿ ಯುವಕರಿಗೆ ಉದ್ಯೋಗ ಅವಕಾಶ ಸಿಕ್ಕುತ್ತದೆ? ಅದರ ಬಗ್ಗೆ ಸ್ಪಷ್ಟವಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು.

ಶ್ರೀ ಈ. ತುಕಾರಾಮ್:– ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟ ಹಾಗೆ ನಿನ್ನೆ calling attention ನಲ್ಲಿ ಕೇಳಿದ್ದೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಬಿಡುತ್ತೇನೆ.

ಅಧ್ಯಕ್ಷರು:– ಒಂದು ನಿಮಿಷ ಇಲ್ಲಿ ಕೇಳಿ.

ಶ್ರೀ ಈ. ತುಕಾರಾಮ್:– ಇಲ್ಲ ಮಾನ್ಯ ಅಧ್ಯಕ್ಷರೆ, ನಿನ್ನೆ ಬ್ರಾಹ್ಮಿಣಿ ಮಿತ್ತೆಲ್‌ಗೆ ಸಂಬಂಧಪಟ್ಟಂತೆ ಒಂದು calling attention notice ಕೊಟ್ಟಿದ್ದೆ. ನೀವು cancel ಮಾಡಿದಿರಿ. Actually ಮಿತ್ತೆಲ್‌ರವರು ಐದು ಸಾವಿರ ಎಕರೆ ತೆಗೆದುಕೊಂಡಿದ್ದಾರೆ. ನಂತರ ಬ್ರಾಹ್ಮಿಣಿಯವರು ಕೂಡ ಆರು ಸಾವಿರ ಎಕರೆ ತೆಗೆದುಕೊಂಡಿದ್ದಾರೆ. ಅದರಲ್ಲಿ ರೈತರಿಗೆ ತಾರತಮ್ಯವಾಗಿದೆ. ಮಾನ್ಯ ಜಿಲ್ಲಾಧಿಕಾರಿಯವರು ಕೂಡ, ಹೌದು ತಾರತಮ್ಯವಾಗಿರುವುದು ಸತ್ಯವಿದೆ

ಎಂದು ಕೊಟ್ಟಿದ್ದಾರೆ. ಇದನ್ನು ಸರಿಮಾಡಬೇಕೆಂದು ನಿನ್ನೆ calling attention notice ಕೊಟ್ಟಿದ್ದೆ. ದಯಮಾಡಿ, ಮಾನ್ಯ ಮುಖ್ಯಮಂತ್ರಿಗಳು ರೈತರಿಗೆ ನ್ಯಾಯ ಕೊಡಬೇಕೆಂದು ಮನವಿ ಮಾಡುತ್ತೇನೆ. ನಮಗೆ industry ಬೇಕು, ನಾವು industry ಗೆ support ಮಾಡುತ್ತಿದ್ದೇವೆ. ಆದರೆ, ರೈತರಿಗೆ ನ್ಯಾಯ ಕೊಟ್ಟು industry ಮಾಡಿ ಎನ್ನುವುದು ನಮ್ಮ ಕಳಕಳಿ.

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ (ಮಂಗಳೂರು ನಗರ):– ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಬೈಕಂಪಾಡಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಸುಮಾರು 12 ವರ್ಷದಿಂದ ಬಾಕಿ ಇರತಕ್ಕಂಥ ಜೆಸ್ಕೋ ಲ್ಯಾಂಡ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು:– ಎಲ್ಲ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಇದರ ಅರ್ಥ ಏನೆಂದರೆ, ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು ಬಂದು ಇಲ್ಲಿ ಭೂಮಿಯನ್ನು ತೆಗೆದುಕೊಂಡಿದ್ದಾರೆ. ಆದರೆ, ಇದುವರೆಗೆ ಕೈಗಾರಿಕೆಯನ್ನು ಪ್ರಾರಂಭ ಮಾಡಿಲ್ಲವೆಂದು ಹೇಳುತ್ತಿದ್ದೀರಿ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ:– ಅಲ್ಲಿ ಸಾಕಷ್ಟು ಜಮೀನು ಖಾಲಿ ಬಿದ್ದಿದೆ. ಅಲ್ಲಿ industries ಮಾಡುವುದಕ್ಕೆ ಸಾಕಷ್ಟು ಜನರಿಗೆ interest ಇದೆ ಹಾಗೆಯೇ ಗಂಜಿಮಟ ಇಂಡಸ್ಟ್ರಿಯಲ್ ಏರಿಯಾದಲ್ಲಿಯೂ ಸಹ ಜಮೀನನ್ನು ತೆಗೆದುಕೊಂಡು ಉಪಯೋಗಿಸದೆ ಖಾಲಿ ಬಿಟ್ಟಿದ್ದಾರೆ. ಆದ್ದರಿಂದ, 10–12 ವರ್ಷ ಆಗಿರತಕ್ಕಂಥದ್ದನ್ನು ತೆಗೆಯಬೇಕು. ಬಿಜೆಪಿ ಸರ್ಕಾರ ಇದ್ದಾಗ ಅವರಿಗೇ ಪುನ: support ಮಾಡಿಕೊಂಡು ಅದನ್ನು ನೆನೆಗುದಿಗೆ ಬಿಟ್ಟಿದೆ ಎಂಬ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು:– ಆಯಿತು. ಸಾಕುಬಿಡಿ.

ಶ್ರೀ ಶಿವಾನಂದ ಎಸ್ ಪಾಟೀಲ್:– ಮಾನ್ಯ ಅಧ್ಯಕ್ಷರೆ, Land Revenue Actನಲ್ಲಿ ರೂಲ್ಸ್ ಅನ್ನು frame ಮಾಡಿಲ್ಲ. ಬಸ್‌ಸ್ಟ್ಯಾಂಡ್ ಮತ್ತು ಸಣ್ಣ ಸಣ್ಣ ಕೆಲಸಗಳು ಸಹ ಕಳೆದ ಎರಡು ವರ್ಷಗಳಿಂದ ಹಾಗೆಯೇ stagnate ಆಗಿವೆ. ಅದು ಕ್ಯಾಬಿನೆಟ್ ಮುಂದೆ ಹೋಗಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ, ಮಾನ್ಯ ಕಾನೂನು ಮಂತ್ರಿಗಳು ಇಲ್ಲಿಯೇ ಇರುವುದರಿಂದ ಅವರ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಬಯಸುತ್ತೇನೆ. 1, 2 ಎಕರೆ ಜಮೀನನ್ನು ಬಸ್‌ಸ್ಟ್ಯಾಂಡ್, ರಸ್ತೆಗೋಸ್ಕರ ಸ್ವಾಧೀನಪಡಿಸಿಕೊಳ್ಳುವುದಕ್ಕೆ social impact study ಆಗಿಲ್ಲವೆಂದು ಕಳೆದ ಎರಡು ವರ್ಷದಿಂದ ಕಂದಾಯ ಇಲಾಖೆಯವರು ಹೇಳುತ್ತಿದ್ದಾರೆ.

ಅಧ್ಯಕ್ಷರು:– ಸರ್ಕಾರ ಎಂದರೆ ಅದೇ ಕಣ್ರೀ.

ಶ್ರೀ ಶಿವಾನಂದ ಎಸ್ ಪಾಟೀಲ್:– ಕಳೆದ ಎರಡು ವರ್ಷಗಳಿಂದ ರೂಲ್ಸ್ ಅನ್ನು ಫ್ರೇಂ ಮಾಡುತ್ತಿಲ್ಲ. ಇದರ ಬಗ್ಗೆ ಮಾನ್ಯ ಜಯಚಂದ್ರರವರು ಏನಾದರೂ ಹೇಳುತ್ತಾರೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು:– ನಿಮಗೆ ಒಂದು ವಿಚಾರ ಗೊತ್ತಿಲ್ಲವೆಂದು ಕಾಣುತ್ತದೆ. ನಮ್ಮಲ್ಲಿ ITI ಗೋಸ್ಕರ 1.5 ಎಕರೆ ಜಮೀನನ್ನು ತೆಗೆದುಕೊಳ್ಳಬೇಕಾದರೆ ಹಿಂದಿನ ಸರ್ಕಾರದಲ್ಲಿ 2.5 ವರ್ಷವಾಗಿತ್ತು. ಇವರು ಎರಡು ವರ್ಷದ ಮೇಲೆ ಅಂದರೆ, ಮೊನ್ನೆ ದಿವಸ ಮಾಡಿಕೊಟ್ಟಿದ್ದಾರೆ. ಆದ್ದರಿಂದ, ಸರ್ಕಾರ ಎಂದರೆ ಹಾಗೆಯೇ?

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಜಯಚಂದ್ರರವರು intervene ಆಗಿ ಉತ್ತರ ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಇಲಾಖೆ ಸಚಿವರು):– ಮಾನ್ಯ ಅಧ್ಯಕ್ಷರೆ, ಹಿಂದೆ Land Acquisition Act ಬಂದಂತ ಸಂದರ್ಭದಲ್ಲಿ 1–01–2013ಕ್ಕೆ ಹಳೆಯ ಆಕ್ಟ್

repeal ಆಗಿ ಹೊಸ ಆಕ್ಟ್ ಬಂತು. ಅದಕ್ಕೆ ನಿಯಮವನ್ನು ರಚಿಸಿದ್ದೆವು. ಅದಕ್ಕೆ ನಿಯಮ ಅಂತಿಮವಾಗಿ ಸಚಿವ ಸಂಪುಟದ ಅನುಮೋದನೆ ಸಹ ಆಯಿತು. ಆದರೆ, ಅದಕ್ಕೆ objecitons ತುಂಬಾ ಬಂತು. ಆ objections hear ಮಾಡಿ final notification ಮಾಡುವುದಕ್ಕೆ ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಸಹ ಆಯಿತು. ಅದನ್ನು issue ಮಾಡುವಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದಲ್ಲಿ ಒಂದು ordinance ಆಯಿತು. ಆ ordinance ಪ್ರಕಾರ ಈಗ ಸಚಿವ ಸಂಪುಟದ ಮುಂದೆ ಇದೆ. ಇದರ ಬಗ್ಗೆ ಮುಂದಿನ ಸಚಿವ ಸಂಪುಟದಲ್ಲಿ ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:– ಆಯಿತು.

ಶ್ರೀ ಶಿವಾನಂದ ಎಸ್. ಪಾಟೀಲ್:– ಎರಡು ವರ್ಷದಿಂದ social impact study ಮಾಡಿ report ಕೊಡುವುದಕ್ಕೆ ಸರ್ಕಾರಕ್ಕೆ ಆಗುತ್ತಿಲ್ಲ.

ಶ್ರೀ ವೈ.ಎಸ್.ವಿ. ದತ್ತಾ:– ಆ ಆರ್ಡಿನೆನ್ಸ್ ಬರುವವರೆಗೆ ಕಾಯುತ್ತೀರಾ ಅಥವಾ ಆರ್ಡಿನೆನ್ಸ್ ಜಾರಿ ಮಾಡುತ್ತೀರಾ?

ಅಧ್ಯಕ್ಷರು:– ಅದನ್ನು ಇಲಾಖೆಯವರು ಮಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ:– ಆರ್ಡಿನೆನ್ಸ್ ಅಂದರೆ ಅದು ಕೂಡ ಆಕ್ಟ್ ಆಗಿರುತ್ತದೆ. ರಾಷ್ಟ್ರಪತಿಗಳ ಅನುಮೋದನೆ ಆಯಿತೆಂದರೆ ಅದು ಆಕ್ಟ್ ಆಗುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್:– ಎರಡು ವರ್ಷದಿಂದ ಆ ಫೈಲ್ ಹಿಂದೆ ಬೆನ್ನು ಹತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ:– ಒಂದು ಕಡೆ it is binding on us.

ಅಧ್ಯಕ್ಷರು:– ಸಾರಿಗೆ ಸಚಿವರು ಇದರ ಬಗ್ಗೆ ಫೀಡ್ ಮಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ:– ರೈತರ ಅನುಮತಿ ಬೇಕಾಗಿಲ್ಲವೆಂಬ ಬಗ್ಗೆ ಬಹಳಷ್ಟು ಕಡೆಯಿಂದ ಇದಕ್ಕೆ ವಿರೋಧ ಬಂದಿದೆ, ರೈತರ ಅನುಮತಿ ಬೇಕಾಗಿಲ್ಲವೆಂಬ ಬಗ್ಗೆ ವಿರೋಧ ಮಾಡಬೇಕೆಂಬ ಪ್ರಕ್ರಿಯೆಗಳು ಇಡೀ ದೇಶದಾದ್ಯಂತ ಪ್ರಾರಂಭವಾಗಿವೆ. ಆದ್ದರಿಂದ, ಈ ಬಗ್ಗೆ ಕೂಡ ನಾವು watch ಮಾಡುತ್ತೇವೆ.

ಅಧ್ಯಕ್ಷರು:– ಆಯಿತು.

ಶ್ರೀ ವೈ.ಎಸ್.ವಿ. ದತ್ತ:– ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ತಂದಿರುವ ಸುಗ್ರೀವಾಜ್ಞೆಗೆ ನಮ್ಮ ಪಕ್ಷ ಮತ್ತು ನಿಮ್ಮ ಪಕ್ಷ ಕೂಡ ವಿರೋಧ ಮಾಡಿದೆ. ಈ ರೀತಿ ಇರುವಾಗ ಮತ್ತೆ ನೀವೇನಾದರು ಮಾಡುವುದಕ್ಕೆ ಹೋದರೆ ಏನಾಗುತ್ತದೆಂಬ ಆತಂಕ ಇದೆ.

ಅಧ್ಯಕ್ಷರು:– ಮಾನ್ಯ ದತ್ತಾರವರೆ, ಹೇಮಾವತಿ ಡ್ಯಾಂ ಕಟ್ಟುವಾಗ ಈ ಆಲೋಚನೆ ಇದ್ದಿದ್ದರೆ ಆ ಭೂಮಿಯನ್ನು ರೈತರು ಏತಕ್ಕೆ ಕಳೆದುಕೊಳ್ಳುತ್ತಿದ್ದರು? ನಿಮ್ಮ ಕೆಲಸ ಪೂರೈಸಿತು, ಈಗ ರೈತರಿಂದ acquire ಮಾಡಬೇಡಿ. ಲಿಂಗನಮಕ್ಕಿ ಡ್ಯಾಂ ಗೋಸ್ಕರ ಸುಮಾರ 50 ರಿಂದ 60 ಸಾವಿರ ಎಕರೆ ಹೋಗಿದೆ. ಇದೆಲ್ಲ ಬಹಳ ಚೆನ್ನಾಗಿದೆ, ಇರಲಿ ಬಿಡಿ ಸಾಕು.

ಶ್ರೀ ವೈ.ಎಸ್.ವಿ. ದತ್ತ:–ಮಾನ್ಯ ಅಧ್ಯಕ್ಷರೆ, ನಾವು ಆಗ ಚಿಕ್ಕ ಹುಡುಗರು.

ಶ್ರೀ ಕೆ. ಶಿವಮೂರ್ತಿ:– ಈ Actಅನ್ನು ಮೂಲಭೂತವಾಗಿ ಕಾಂಗ್ರೆಸ್ ಪಕ್ಷವೇ ತೆಗೆದುಕೊಂಡು ಬಂದಿತು.

ಅಧ್ಯಕ್ಷರು:– ಈಗ ಒಂದು ಪ್ರಕಟಣೆ ಇದೆ.